# ಕನ್ನಡ ನಾಡು ನುಡಿ ಸಂಸ್ಕೃತಿ



**Name: Sahana Shree L.V**

**Class: Bcom 1st Sem D sec**

ವಿಷಯಗಳು :

- ನಾಡು ನುಡಿ
- ಸಾಹಿತ್ಯ ಮತ್ತು ಸಾಧನೆ
- ಕವಿ
- ಸಂಸ್ಕೃತಿ

# ಕನ್ನಡ ನಾಡು




ನವೆಂಬರ್ 1, ಕನ್ನಡಿಗರಿಗೆಲ್ಲ ಸಂಭ್ರಮ ಮತ್ತು ಸಡಗರದ ದಿನ. ಹಾಗೆಯೇ ಕನ್ನಡ ನಾಡು-ನುಡಿಯ ಅಭಿವೃದ್ಧಿಯ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸುವ ದಿನವೂ ಆಗಿದೆ.ಸರಿಸುಮಾರು ಎರಡೂವರೆ ಸಾವಿರ ವರ್ಷಗಳ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದ ಈ ಕನ್ನಡ ನಾಡನ್ನು ಶಾತವಾಹನ, ಗಂಗ, ಕದಂಬ, ಚಾಲುಕ್ಯ,ರಾಷ್ಟ್ರಕೂಟ ಹೊಯ್ಸಳ ಮುಂತಾದ ರಾಜವಂಶದವರು ಆಳುವುದಲ್ಲದೆ ರಾಷ್ಟ್ರದ ಇತಿಹಾಸದಲ್ಲಿ ತಮ್ಮ ಕೀರ್ತಿಗಾಥೆಯನ್ನು ಸುವರ್ಣಾಕ್ಷರಗಳಿಂದ ದಾಖಲಿಸಿದ್ದಾರೆ.

# ಕನ್ನಡ ನಾಡು

ಸಂಸ್ಕೃತಿಯ ನೆಲೆವೀಡು. ಇದು ಸಾಧಕರ ಕರ್ಮಭೂಮಿ. ನಾಡು - ನುಡಿ - ಸಂಸ್ಕೃತಿಗಳಿಗಾಗಿ ಸರ್ವಸ್ವದೊಂದಿಗೆ ಜೀವವನ್ನೂ ತೆತ್ತವರ ಮಣ್ಣಿದು. ಶತಮಾನಗಳ ಹಿಂದೆ ಮದರಾಸು ಸರಕಾರದ ವ್ಯಾಪ್ತಿಯಲ್ಲಿದ್ದುದರಿಂದ ಅಲ್ಲಿನ ಪ್ರಭಾವ, ನಂತರ ಕರ್ನಾಟಕದ ಪ್ರೇರಣೆ, ಅಲ್ಲಿಂದ ನಂತರ ಕೇರಳಕ್ಕೆ ಸೇರಿಕೊಂಡ ಬಳಿಕ ಮಲೆಯಾಳಂ ಮನೆ-ಮನಗಳ ಆವರಣ. ಹೀಗೆ ಭೌಗೋಳಿಕವಾಗಿ ಇಲ್ಲಿನ ಸಾಂಸ್ಕೃತಿಕ ಶ್ರೀಮಂತಿಕೆಗೆ - ಕಲಾವಂತಿಕೆಗೆ ಹಲವು ಮಜಲುಗಳು - ಕವಲುಗಳು. ಸುಸಂಸ್ಕೃತವಾದುದು, ಆರೋಗ್ಯಪೂರ್ಣವಾದುದು, ಸಕಾರಾತ್ಮಕವಾದುದು ಎಲ್ಲಿಂದ ಲಭಿಸಿದರೂ ನಮಗದು ಸ್ವೀಕೃತ.

ಈ ಎಲ್ಲ ಅಂಶಗಳನ್ನು ಒಂದೇ ಕಡೆ ನೀಡುವ ನಮ್ಮ ಕನ್ನಡ ನಾಡು ಯತ್ನವಿದು.ಸೀಮಿತತೆಯ ನಡುವೆಯೂ ಸಂಸ್ಕೃತಿ-ಕಲೆಗಳ ಸುಗಂಧವನ್ನು ಬೀರುವ ವರಕರ್ಪೂರ ಕವಳದ ತಟ್ಟೆಯಿದು. ನೀವೂ ಮೆಚ್ಚಿಕೊಂಡ ಕಲಾ-ಸಾಂಸ್ಕೃತಿಕ ವಿಚಾರಗಳ ಕುರಿತು ಈ ಪುಟದಲ್ಲಿ ಬರೆಯಬಹುದು.







ಕನ್ನಡ







# <u>ಕನ್ನಡ ಸಾಹಿತ್ಯ</u>

•ಕನ್ನಡ ಸಾಹಿತ್ಯವೆಂಬುದು ವಿಶಾಲವಾದ ವಿವರವುಳ್ಳ, ವಿಚಾರವುಳ್ಳ ಶಿಸ್ತು. ಈ ಭಾಗದಲ್ಲಿ ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡದ ಕವಿಗಳು, ಕನ್ನಡ ಕೃತಿಗಳು ಕುರಿತಂತೆ ಮಾಹಿತಿಗಳು ಸಮಗ್ರವಾಗಿ ಇಲ್ಲ. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಎಲ್ಲಾ ಮಜಲುಗಳಲ್ಲಿ ಆದ, ಆಗಬೇಕಾದ ವಿಚಾರಗಳನ್ನು, ಚಿಂತನೆಗಳನ್ನು ಈ ಪುಟದಲ್ಲಿ ನೀಡಲು ಬಯಸಲಾಗಿದೆ.

•


•ಕನ್ನಡವು ಒಂದು ದ್ರಾವಿಡ ಭಾಷೆಯಾಗಿದೆ. ಕನ್ನಡ ಲಿಪಿಸುಮಾರು ೧೫೦೦-೧೬೦೦ ವರ್ಷಗಳಿಗಿಂತಲೂಹಿಂದಿನದು. ಐದನೆಯ ಶತಮಾನದ ಹಲ್ಮಿಡಿ ಶಾಸನದಸಮಯಕ್ಕಾಗಲೇ ಕನ್ನಡವು ಸಾಕಷ್ಟು ಅಭಿವೃದ್ಧಿಹೊಂದಿತ್ತು. ದ್ರಾವಿಡ ಭಾಷಾತಜ್ಞ ಸ್ಟ್ಯಾನ್‌ಫೋಡ್ಸ್ಟೀವರ್ ಅವರ ಅಭಿಪ್ರಾಯದಂತೆ, ಕನ್ನಡದ ಭಾಷಿಕಚರಿತ್ರೆಯನ್ನು ಮೂರು ವಿಧವಾಗಿ ವಿಂಗಡಿಸಬಹುದು;1. ಹಳಗನ್ನಡ ಕ್ರಿ.ಶ. ೪೫೦ರಿಂದ ಕ್ರಿ.ಶ. ೧೨೦೦ರವರೆಗೆ,2. ನಡುಗನ್ನಡ ಕ್ರಿ. ಶ. ೧೨೦೦ರಿಂದ ಕ್ರಿ.ಶ.೧೭೦೦ರವರೆಗೆ ಮತ್ತು3. ಹೊಸಗನ್ನಡ ಕ್ರಿ. ಶ. ೧೭೦೦ರಿಂದ ಪ್ರಸ್ತುತಕಾಲಘಟ್ಟದವರೆಗೆ


## ಕನ್ನಡ ಸಾಧಕರು

- ಕನ್ನಡದಲ್ಲಿ ಅನೇಕ ಸಾಧನೆ ಮಾಡಿರುವ ಹಲವಾರು ಜನರಿದ್ದಾರೆ. ಹಾಗೆಯೇ ಅನೇಕ ಕವಿಗಳಿದ್ದರೆ . ಇವರೆಲ್ಲ ಮಹಾನ್ ಬಿರುದು ಪಡೆದಿರುವ ಕನ್ನಡದ ಮಣಿಗಳು

ಕುವೆಂಪು

ದ.ರಾ.ಬೇಂದ್ರೆ





# ದಾಸ ಸಾಹಿತ್ಯ

ದಾಸ ಸಾಹಿತ್ಯ (ಭಕ್ತಿ ಸಾಹಿತ್ಯ) ೧೫ನೇ ಶತಮಾನದಲ್ಲಿ ಆರಂಭಗೊಂಡ ಭಕ್ತಿ ಪಂಥದ ಹರಿದಾಸರಿಂದ ವಿರಚಿತವಾದದ್ದು. ಈ ಪದ್ಯಗಳಿಗೆ ಸಾಮಾನ್ಯವಾಗಿ 'ಪದ' ಗಳೆಂದು ಹೆಸರು. ಇವು ಭಗವಂತನಲ್ಲಿ ಒಂದಾಗ ಬಯಸುವ ಭಕ್ತನ ಭಾವವನ್ನು ಪ್ರತಿಬಿಂಬಿಸುತ್ತವೆ. ಈ ಸಾಹಿತ್ಯ ಸಂಗೀತದೊಂದಿಗೂ ನಿಲುಕಿದೆ.

ದಾಸ ಸಾಹಿತ್ಯ ಸಂಗೀತ ಪದ್ಧತಿಗಳಲ್ಲೊಂದಾದ ಕರ್ನಾಟಕ ಸಂಗೀತಕ್ಕೆ ಬುನಾದಿಯಾಗಿದೆ. ದಾಸರ ಪದಗಳಿಗೆ ದೇವರನಾಮಗಳೆಂದೂ ಹೆಸರು. ಈ ಪ್ರಕಾರದ ಮುಖ್ಯ ಕನ್ನಡ ಕವಿಗಳೆಂದರೆ ಪುರಂದರದಾಸ (೧೪೯೪-೧೫೬೪) ಮತ್ತು ಕನಕದಾಸ(೧೫೦೯-೧೬೦೯).

ಇವರನ್ನು ದಾಸ ಸಾಹಿತ್ಯದ ಅಶ್ವಿನಿದೇವತೆಗಳೆಂದು ಕರೆಯಲಾಗಿದೆ.

# ಸಾಧಕರು

1.ರಂಗಭೂಮಿಯ ಭೀಷ್ಮ ಬಿ.ವಿ. ಕಾರಂತ್
2.ಕನ್ನಡ ಡಿಂಡಿಮ ಮೊಳಗಿಸಿದ ರಸಋಷಿ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ
3.ಸಾಧನಕೇರಿಯ ಅನರ್ಘ್ಯ ರತ್ನ 'ಅಂಬಿಕಾತನಯ ದತ್ತ'
4.ಕನ್ನಡದ ಆಸ್ತಿ 'ಶ್ರೀನಿವಾಸ' ಎಂಬ ಮಾಸ್ತಿ
5.ಬಹುಮುಖ ವ್ಯಕ್ತಿತ್ವದ ತ್ರಿವಿಕ್ರಮ ಪ್ರತಿಭೆಯ ಶಿವರಾಮ ಕಾರಂತರು
6.ಸಮುದ್ರಗೀತೆಗಳ ಅಲೆಯಲ್ಲಿ ಭಾರತ ಸಿಂಧು ರಶ್ಮಿಯಾಗಿ ಕಂಗೊಳಿಸಿದ ಗೋಕಾಕ್
7.ಡಾ.ಯು.ಆರ್. ಅನಂತಮೂರ್ತಿ ಎಂಬ ಆಲದಮರ
8.ಕರುನಾಡಿನ ಹೆಮ್ಮೆಯ ಪರಿಪೂರ್ಣ ನಾಟಕಕಾರ 'ಕಾರ್ನಾಡ್'
9.ಭಾರತೀಯ ಸಾಹಿತ್ಯ ಕ್ಷೇತ್ರದ ಪರಮೋಚ್ಚ ಪುರಸ್ಕಾರ 'ಜ್ಞಾನಪೀಠ'
10.ಪತ್ರಕರ್ತ, ನಾಟಕಕಾರ, ವಾಗ್ಮಿ ಟಿ.ಎಂ. ಸತೀಶ್
11.ಜನಾನುರಾಗಿ, ಸಮಾಜ ಸೇವಕ ಶಂಕರನಾರಾಯಣ್
12.ಸಮಾಜ ಸೇವಕ, ಜನಾನುರಾಗಿ ಕೆ. ಧರಣೀಶ್

# ಕವಿ

ಹಳಗನ್ನಡ ಕಾಲದ ಕವಿಗಳು
ಸಮಂತ ಭದ್ರ
ಶಿವಕೋಟ್ಯಾಚಾರ್ಯ
ಪಂಪ
ರನ್ನ
ಪೊನ್ನ
ಜನ್ನ
ಪುಲಿಗೆರೆ ಸೋಮನಾಥ
ಪಲ್ಕುರಿಕಿ ಸೋಮನಾಥ
ನಯಸೇನ
ಅಸಗ
ಗುಣನಂದಿ
ಕೇಶಿರಾಜ
ನಾಗವರ್ಮ-೧
ನಾಗವರ್ಮ-೨



# ಕನ್ನಡ ಕಿವಿಗಳು

ಕನ್ನಡ ಕವಿಗಳು ಅಂದರೆ ಕನ್ನಡ ನುಡಿಯಲ್ಲಿ ಕಾವ್ಯ /ಸಾಹಿತ್ಯ ರಚನೆ ಮಾಡಿದವರು ಹಾಗೂ ಕನ್ನಡ ನಾಡು ನುಡಿ ಚರಿತ್ರೆಯನ್ನು ಬರೆದು ಸಾಹಿತ್ಯದ ಕಥೆ, ಕವನ,ಹಾಡು,ಹರಟೆ, ಪ್ರಬಂಧ, ಪ್ರವಾಸ ಕಥನ ಇತರೆ ಎಲ್ಲಾ ಪ್ರಕಾರಗಳಲ್ಲಿ ರಚಿಸುವರನ್ನು ಕವಿಗಳು ಎಂದು ಕರೆಯಲಾಗಿದೆ. ಕನ್ನಡ ಸಾಹಿತ್ಯದ ಹುಟ್ಟಿಯಿಂದಲೂ ಬೆಳೆದು ಬದುಕಿರುವ ಇಲ್ಲಿಯವರೆಗೆ ಅಂದರೆ ದುರ್ವಿನೀತ, ಶ್ರೀವಿಜಯ, ಪಂಪನಿಂದ ಹಿಡಿದು ಇಂದಿನವರೆಗೆ ನೂರಾರು ಕನ್ನಡ ಕವಿಗಳು ಕನ್ನಡ ಸಾಹಿತ್ಯಕ್ಕೆ ಭವ್ಯ ಮೆರಗು ಕೊಡುಗೆಗಳನ್ನು ನೀಡಿದ್ದಾರೆ. ಅವರ ಪರಿಚಯ ಮಾಡಿಕೊಡುವ ಸಣ್ಣ ಪ್ರಯತ್ನ ಈ ಬರಹದು.

**ಸಮಂತ ಭದ್ರ :- ನನ್ನು, "ಚಾಮುಂಡರಾಯ ಪುರಾಣ" ದಲ್ಲಿ ಹಾಗೂ "ಜಿನಸೇನಾಚಾರ್ಯ " "ಸಂಸ್ಕೃತದ ಪೂರ್ವಪುರಾಣದಲ್ಲಿ " ಸುತ್ತಿಸಿರುವದು " ಆರ್. ನರಸಿಂಹಾಚಾರ್ಯ ಉಲ್ಲೇಖಿಸಿದ್ದಾರೆ. ಇವನ ಕಾಲ ಕ್ರಿ. ಶ. ಕ. ೪00. " ಶ್ರವಣ ಬೆಳಗೊಳದ ಶಾಸನ ಸಂಖ್ಯೆ ಕ್ರಿ.ಶ.ಕ. ೧೧೨೯ ದಲ್ಲಿ ಈತನ ಕೀರ್ತಿಸಲಾಗಿದೆ. ಈತನು ವಾದಮಾಡುವ ನಿಮಿತ್ತ " ಪಾಟಲಿಪುತ್ರ, ಮಾಳವ, ಸಿಂಧು, ಠಕ್ಕದೇಶ, ಕಾಂಚೀ, ವಿದಿಶ, ಕರಹಾಟಕ, ದೇಶಗಳಿಗೆ ಹೋಗುತ್ತಿದ್ದ. " ಸಮಂತಭದ್ರನ" ಕುರಿತು " ರಾಜಾವಳಿಕಥಾಸಾರ " ಕೃತಿಯಲ್ಲಿ ದೇವಚಂದ್ರನು. " ಪೂರ್ವ ಕವಿಗಳ ಕಥೆ " ಅಧ್ಯಾಯ ೫ ರಲ್ಲಿ ಸಮಂತ ಭದ್ರನ ಕುರಿತು ತನ್ನದೆ ಕಥೆ ಬರೆದಿದ್ದಾನೆ.**

# ಧನ್ಯವಾದಗಳು

